16)	ಮಹಾತ್ಮ ಗಾಂಧಿ -"-	-	1
17)	ಮರಾಠವಾಡ -"-	-	2
18)	ನಾಗಪುರ -"-	-	2
19)	ಒಸ್ಮಾನಿಯ -"-	-	1
20)	ರಾಜಸ್ತಾನ್ -"-	-	1
21)	ರವಿಶಂಕರ್ -"-	-	1
22)	ರೂರೆಕಿಯ -"-	-	1
23)	ಶಿವಾಜಿ -"-	-	3
24)	ವೆಂಕಟೇಶ್ವರ -"-	-	5
	ಒಟ್ಟು		**39**
	ತಿರಸ್ಕೃತ ಅರ್ಜಿಗಳ ಸಂಖ್ಯೆ		**174**
	ಒಟ್ಟು		**3054**

ಸಭೆಯ ಮುಂದಿಡಲಾದ ಕಾಗದಪತ್ರಗಳು.

ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಸನ್ಮಾನ್ಯ ಸಭಾಧ್ಯಕ್ಷರೇ, ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರವರು ನೀಡಿರುವ ಕರ್ನಾಟಕ ಸರಕಾರದ 1997ನೇ ಸಾಲಿನ ಮಾರ್ಚ್ 31ರ ಅಂತ್ಯದವರೆಗೆ (ಕಂದಾಯ ಸ್ವೀಕಾರಕ್ಕೆ) ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಇಡುತ್ತಾ ಇದ್ದೇನೆ.

ಅಧ್ಯಕ್ಷರು : ಈಗ ಮಾನ್ಯ ವಿರೋಧಪಕ್ಷದ ನಾಯಕರಿಂದ ಚರ್ಚೆ: ಸನ್ಮಾನ್ಯ ಅರಣ್ಯ ಮಂತ್ರಿಯವರು, ಕಂದಾಯ ಮಂತ್ರಿಯವರು

ಡಾ॥ ಎಂ. ಶಂಕರನಾಯಕ್ : ಮಾನ್ಯ ಅಧ್ಯಕ್ಷರೆ, ನಾನು ಒಂದು ರಿಪ್ಲೈ ಕೊಡಬೇಕಾಗಿತ್ತು.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪಿಸಲಿದ್ದಾರೆ. ನೀವು ಸ್ಟೇಟ್‌ಮೆಂಟನ್ನು ಮೆಡಿಕಲ್ ಎಜ್ಯುಕೇಷನ್ ಬಗ್ಗೆ ಮಾಡುವುದು ಇದೆ. ಅದನ್ನು ಈ ಪ್ರಸ್ತಾಪ ಆದಮೇಲೆ ತೆಗೆದುಕೊಳ್ಳೋಣ. ಅದು ನಾನು ಸಭೆಗೆ ಮಾಡಿದ ಕಮಿಟ್‌ಮೆಂಟ್. ಮಾನ್ಯ ಪ್ರಕಾಶ್‌ರವರೇ, ರೆವಿನ್ಯೂ ಸಚಿವರನ್ನು ಕರೆಯಿಸುತ್ತೀರೋ? ಸರಕಾರದ ಪರವಾಗಿ ಅರಣ್ಯ ಸಚಿವರೇ ಉತ್ತರವನ್ನು ಕೊಡುವುದಾದರೆ ನಮ್ಮ ಆಕ್ಷೇಪಣೆ ಇಲ್ಲ. ಅವರು ಆಗ ಎದ್ದು ನಿಂತಿದ್ದರು, ಅವರಿಗೆ ಆಗ ಅವಕಾಶವನ್ನು ಕೊಟ್ಟಿರಲಿಲ್ಲ. ಈಗ ಅವರು ಹೇಳಬಯಸುವುದಾದರೆ ಹೇಳಬಹುದು.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಈ ವಿಚಾರದಲ್ಲಿ ರೆವಿನ್ಯೂ ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಸರ್ವೆಯನ್ನು ಜಂಟಿಯಾಗಿ ಮಾಡುತ್ತಾ ಇದ್ದಾರೆ.

ಅಧ್ಯಕ್ಷರು : ಅದರ ವಿವರಗಳನ್ನು ತಾವುಗಳು ಕೊಡಬಹುದು.

ನಿಲುವಳಿ ಸೂಚನೆ

ಪಶ್ಚಿಮಘಟ್ಟದಲ್ಲಿ ಅರಣ್ಯ ಒತ್ತುವರಿಯನ್ನು ತೆರವು ಮಾಡುವ ಬಗ್ಗೆ ಸುಪ್ರೀಂಕೋರ್ಟ್‌ನಿಂದ ಎಚ್ಚರಿಕೆ ನೀಡಿರುವುದು.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ದಿನ ಈ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ವಿಶೇಷವಾಗಿ ಸುಪ್ರೀಂಕೋರ್ಟ್ ಇವೊತ್ತು ಒಂದು ಆದೇಶವನ್ನು ಕೊಟ್ಟು ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 414 ಕೇಸ್‌ಗಳಲ್ಲಿ ಒತ್ತುವರಿ ಆಗಿ, ಅಲ್ಲಿ ಫಾರೆಸ್ಟ್ ಜಮೀನು ಏನು ಒತ್ತುವರಿ ಆಗಿದೆ, ಅದರ ಬಗ್ಗೆ ಈ ಹಿಂದೆಯೂ ಕೂಡ ಈ ಸದನದಲ್ಲಿ ಆ ವಿಷಯವು ಪ್ರಸ್ತಾಪ ಆಗಿರುತ್ತದೆ. ಆದರೆ ಸರಕಾರದವರು ಆಗ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಅದನ್ನು ತಳ್ಳಿ ಹಾಕಿದರು. ವಿರೋಧ ಪಕ್ಷದವರು ಯಾವಾಗಲೂ ಕೂಡ ಇಂಥ ಆಲಿಗೇಷನ್ಸ್ ಮಾಡುತ್ತಾರೆ. ಅದನ್ನು ನಾವು ಯಾಕೆ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ಅಲ್ಲಗಳೆಯತಕ್ಕಂಥ ಪ್ರಯತ್ನವನ್ನು ಸರಕಾರದವರು ಮಾಡಿದ್ದಾರೆ.

12.40 ಪಿ.ಎಂ

ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್‌ನಲ್ಲೂ ಹೀಗೆ ಆಗಿದೆ ಎಂದು ಹೇಳಿದಾಗ ಅದನ್ನು ತಳ್ಳಿ ಹಾಕಿದಿರಿ. ಎಸ್ಟಿಮೇಟ್ ಕಮಿಟಿ ರಿಪೋರ್ಟ್ ಕೊಟ್ಟಮೇಲೆ ಕಣ್ಣನ್ನು ತೆರೆದಿದ್ದೀರಿ. ಅದನ್ನೂ ಕೂಡ ಯಾವ ರೀತಿಯಾಗಿ ತಳ್ಳಿಹಾಕಬೇಕು ಎನ್ನುವ ಬಗ್ಗೆ ಪ್ರಯತ್ನ ನಡೆದಿದೆ. ಅದೇ ರೀತಿಯಾಗಿ ಇದರ ಬಗ್ಗೆಯೂ ಕೂಡ ಡಿಸೆಂಬರ್ 8ನೇ ತಾರೀಖು 1997 ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಇದರ ಬಗ್ಗೆ ಒಳ್ಳೆಯ ಒಂದು ಸವಿಸ್ತಾರವಾದ ಆರ್ಟಿಕಲ್ ಬಂದಿತ್ತು. ಆಗಲೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಇದರ ಬಗ್ಗೆ ಸರ್ಕಾರ ಸ್ಪಂದಿಸಲಿಲ್ಲ. ಇವತ್ತು ಸುಪ್ರೀಂ ಕೋರ್ಟು ನೇರವಾಗಿ ಅಪಾದನೆಯನ್ನು ಮಾಡಿದೆ. ಇವತ್ತು ಯಾರು ಎನ್‌ಕ್ರೋಚರ್ಸ್ ಇದ್ದಾರೆ, ಅವರನ್ನು ಎವಿಕ್ಟ್ ಮಾಡಿಸುವಲ್ಲಿ ಸರ್ಕಾರ ಅಸಮರ್ಥವಾಗಿದೆ. ಇದರ ಬಗ್ಗೆ ಯಾವ ರೀತಿಯಲ್ಲೂ ಕಾಳಜಿಯನ್ನು ವಹಿಸಿಲ್ಲ. ಇದರ ಬಗ್ಗೆ ನಿರ್ಲಕ್ಷ್ಯವನ್ನು ಮಾಡಿದ್ದಾರೆ. ನಾನು ನನ್ನ ಭಾಷೆಯಲ್ಲಿಯೇ ಹೇಳಬೇಕೆಂದರೆ ನೀವು ಎನ್‌ಕ್ರೋಚ್‌ಮೆಂಟ್ ಮಾಡತಕ್ಕಂಥವರಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದೀರಿ ಎನ್ನುವ ಮಾತನ್ನು ನೇರವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು ನೀವು ಪ್ರೋತ್ಸಾಹವನ್ನು ಕೊಡುತ್ತಿದ್ದೀರಿ ಎನ್ನುವುದಕ್ಕೆ ಉದಾಹರಣೆ ಎಂದರೆ ಸುಪ್ರೀಂಕೋರ್ಟ್‌ನವರು ಡೈರೆಕ್ಟ್‌ಲಿ ಹೇಳಿ ಬಿಟ್ಟಿದ್ದಾರೆ. ಏನೆಂದರೆ :

"Obivously, there has been violation of this court's order and inaction by the Government to evict the eneroachers. Further the court made it clear before for decides to take action against the State Government for alleged inaction, it would like to grant an opportunity to explain its stand on the issues involved``,